ಜಮೀನನ್ನು ಯಾರೂ ಜಮೀನು ಕಳೆದುಕೊಂಡಿದ್ದಾರೆ ಅವರಿಗೆ ಆ ಜಮೀನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಖಾತೆ ಸಚಿವರು) : ಫಾರೆಸ್ಟ್ ಭೂಮಿ ಅಲ್ಲದೆ, ಬೇರೆ ಯಾವುದಾದರೂ ರೆವಿನ್ಯೂ ಲ್ಯಾಂಡ್ ಇದ್ದರೆ ರಿಯಾಬಿಲಿಟೇಷನ್‌ನಲ್ಲಿ ಶಿಫ್ಟಿಂಗ್ ಮಾಡುವಾಗ ಸೈಟು ವಿತರಣೆ ಮಾಡುವುದಕ್ಕೆ ಮನೆ ಕಟ್ಟುವುದಕ್ಕೆ ಸರ್ಕಾರಿ ಭೂಮಿ ಇದ್ದರೆ ಅದನ್ನು ಅಕ್ವೈರ್ ಮಾಡಿಕೊಡಬೇಕೆಂದು ಹೇಳಿದ್ದೇವೆ. ತಾವು ಹೇಳಿದ ಹಾಗೆ ಕಂದಾಯ ಇಲಾಖೆಯದ್ದು ಭೂಮಿ ಇದ್ದರೆ ಅದು ಇರಿಗೇಷನ್ ಲ್ಯಾಂಡ್ ಇರಲಿ ಅದನ್ನು ರಿಸರ್ವ್ ಮಾಡುವಹಾಗೆ ನಾನು ಇವತ್ತೇ ಆದೇಶ ಕೊಡುತ್ತೇನೆ. ಆದರೆ ಫಾರೆಸ್ಟ್ ಲ್ಯಾಂಡ್ ಇದ್ದರೆ ಅದು ಬರುವುದಿಲ್ಲ.

ಶಾಸಕರಿಗೆ ಅಧಿಕಾರಿಗಳು ಬೆದರಿಕೆ ಹಾಕಬೇಕೆಂಬ ಹೇಳಿಕೆ

ಶ್ರೀ ಗೋವಿಂದ ಮುಕುಟಪ್ಪ ಕಾರಜೋಳ (ಮುಧೋಳ) : ಮಾನ್ಯ ಅಧ್ಯಕ್ಷರೇ, ನಾನು ಎರಡು ಬಾರಿ ತಮಗೆ ಪತ್ರಗಳನ್ನು ಬರೆದಿದ್ದೆ, ನಾನು ಈ ಸದನದ ಒಬ್ಬ ಗೌರವಾನ್ವಿತ ಸದಸ್ಯ. ನನ್ನ ಕಾರ್ಯವನ್ನು ನಿರ್ವಹಿಸಲಿಕ್ಕೆ ಅಷ್ಟೇ ಅಲ್ಲ, ಅಧಿಕಾರಿಗಳಿಗೂ ಕೂಡ ಬೆದರಿಕೆಯನ್ನು ಹಾಕಿ, ಇವರು ಶಾಸಕರು ಅಲ್ಲ, ಇವರ ಮಾತನ್ನು ಯಾರೂ ಕೇಳಬಾರದು, ಇವರಿಗೆ ಸರ್ಕಾರದಲ್ಲಿ .....

ಉಪಾಧ್ಯಕ್ಷರು : ಈಗಾಗಲೇ ಸಹಕಾರ ಸಚಿವರು ಉತ್ತರ ಕೊಟ್ಟಿದ್ದಾರೆ. ಮತ್ತೆ ಅವರು ಈಗ ಇಲ್ಲಿ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಇಲ್ಲ ಸರ್. ಅವರು ಇಲ್ಲ ಎಂದರೆ ಹೇಗೆ? ತಾವು ಅವರನ್ನು ಕರೆಸಬೇಕಾಗುತ್ತದೆ.

ಉಪಾಧ್ಯಕ್ಷರು : ಈಗ ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ : ಉತ್ತರ ಕೊಟ್ಟಿಲ್ಲ.

ಉಪಾಧ್ಯಕ್ಷರು : ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಉಪಮುಖ್ಯಮಂತ್ರಿಗಳೇ, ನೀವು ಉತ್ತರ ಹೇಳಿ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) : ಇದು ಅವರಿಗೆ ವೈಯಕ್ತಿಕವಾಗಿ ಸಂಬಂಧಪಟ್ಟಿರುವುದರಿಂದ ಅವರೇ ಉತ್ತರ ಕೊಡಬೇಕಾಗುತ್ತದೆ.

ಉಪಾಧ್ಯಕ್ಷರು : ಹೌದು. ಇದಕ್ಕೆ ಅವರೇ ಉತ್ತರ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ನನಗೆ ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಕೊಡಿ. ಇದು ಒಬ್ಬ ಶಾಸಕರ ಹಕ್ಕುಚ್ಯುತಿ ಪ್ರಶ್ನೆ ಇದೆ. ಇದು ನನ್ನದು ಒಬ್ಬನದ್ದೇ ಅಲ್ಲ. ಈ ಕಡೆ, ಆ ಕಡೆ ಎಲ್ಲ ಸದಸ್ಯರದ್ದೂ ಪ್ರಶ್ನೆ ಇದೆ

ಉಪಾಧ್ಯಕ್ಷರು : ಈಗ ಅವರು ಇಲ್ಲಿ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಇದು ಈ ಸಭೆಯ ಒಬ್ಬ ಗೌರವಾನ್ವಿತ ಸದಸ್ಯರ ಹಕ್ಕುಚ್ಯುತಿ ಪ್ರಶ್ನೆ ಇದೆ.

ಉಪಾಧ್ಯಕ್ಷರು : ಈಗಾಗಲೇ ನೀವು ಹಕ್ಕುಚ್ಯುತಿ ನಿರ್ಣಯವನ್ನು ಕಳುಹಿಸಿದ್ದೀರಿ. ಅದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ಮತ್ತೆ ಇಲ್ಲಿ ಪ್ರಸ್ತಾಪ ಮಾಡುವುದಾದರೆ ಈಗ ಅವರು ಇಲ್ಲಿ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಆಗುವುದಿಲ್ಲ ಎಂದರೆ ನಾನು ತಮ್ಮಲ್ಲಿ ಅಪೀಲ್ ಮಾಡಿಕೊಳ್ಳುತ್ತೇನೆ. ಆಗುವುದಿಲ್ಲ ಎಂದರೆ ಇದು ಕೊನೆಯ ನಿರ್ಣಯ ಅಲ್ಲ. ಮರು ಪರಿಶೀಲನೆ ಮಾಡಬಹುದು.

(ಗೊಂದಲ)

ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ತರತಕ್ಕಂಥ ವಿಚಾರ ಏನು ಎಂದರೆ, ಮಾನ್ಯ ಸದಸ್ಯರು ಹೇಳುತ್ತಿರತಕ್ಕಂಥಾದ್ದು ಅದು ನಿಜವೋ ಅಥವಾ ಸುಳ್ಳೋ ಗೊತ್ತಿಲ್ಲ. ಇದು ಅವರು ಹೇಳತಕ್ಕಂಥ ಧಾಟಿ ನೋಡಿದರೆ ಮಾನ್ಯ ಸದಸ್ಯರ ಹಕ್ಕುಚ್ಯುತಿಯಾಗುತ್ತದೆ. ಅದಕ್ಕೆ ನಿಯಮಾವಳಿ ಪ್ರಕಾರ ಮೊದಲು ಸೂಚನೆ ಕೊಡಬೇಕಾಗುತ್ತದೆ. ಆದ್ದರಿಂದ ಏಕಾಏಕಾಯಾಗಿ ಇದನ್ನು ತರುವಾಗ ಸಂಬಂಧಪಟ್ಟ ಸಚಿವರ ಗಮನಕ್ಕೂ ಕೂಡ ಅವರು ತರಬೇಕಾಗುತ್ತದೆ. ಅದು ಬಿಟ್ಟು ಏಕಾಏಕಾಯಾಗಿ ಶೂನ್ಯವೇಳೆಯಲ್ಲಿ ಇದನ್ನು ಪ್ರಸ್ತಾಪ ಮಾಡುವುದಕ್ಕೆ ನಿಯಮಾವಳಿಯಲ್ಲಿ ಅವಕಾಶ ಇಲ್ಲ. ದಯವಿಟ್ಟು ತಾವು ಇದಕ್ಕೆ ಅವಕಾಶವನ್ನು ಕೊಡಕೊಡದು ಎಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೇ .....

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ. ಇಲ್ಲ, ಇಲ್ಲ, ತಮಗೆ ಅವಕಾಶ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ನಿಯಮಾವಳಿ ಪ್ರಕಾರ ನೋಟೀಸ್ ಕೊಟ್ಟಿದ್ದೇನೆ.

ಉಪಾಧ್ಯಕ್ಷರು : ಇಲ್ಲ. ನೋಟೀಸನ್ನು ಈಗಾಗಲೇ ರಿಜೆಕ್ಟ್ ಮಾಡಲಾಗಿದೆ. ತಮಗೆ ಅವಕಾಶ ಇಲ್ಲ. ತಾವು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

(ಮಾನ್ಯ ಸದಸ್ಯರಾದ ಶ್ರೀ ಗೋವಿಂದ ಎಂ. ಕಾರಜೋಳ ಅವರು ಮಾತನಾಡುತ್ತಲೇ ಇದ್ದರು)

ಉಪಾಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಿ. ತಾವು ಮಾತನಾಡಿದರೆ ಅದು ರೆಕಾರ್ಡಿಗೆ ಹೋಗುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ನೀವು ಕೇಳುವುದಿಲ್ಲ ಎಂದರೆ ಹೇಗೆ? ನೀವು

ಉಪಾಧ್ಯಕ್ಷರು : ತಾವು ಮಾತನಾಡಿದ್ದು ರೆಕಾರ್ಡಿಗೆ ಹೋಗುವುದಿಲ್ಲ. ನಿಮ್ಮ ನೋಟೀಸನ್ನು ಈಗಾಗಲೇ ರಿಜೆಕ್ಟ್ ಮಾಡಲಾಗಿದೆ. ತಾವು ಮಾತನಾಡಿದ್ದು ರೆಕಾರ್ಡಿಗೆ ಹೋಗುವುದಿಲ್ಲ.

(ಮಾನ್ಯ ಸದಸ್ಯರು ಮಾತನಾಡುತ್ತಲೇ ಇದ್ದರು. ಉಪಾಧ್ಯಕ್ಷರ ಆದೇಶದ ಮೇರೆಗೆ ಅವರು ಮಾತುಗಳನ್ನು ದಾಖಲು ಮಾಡಿಕೊಳ್ಳಲಿಲ್ಲ)

ಶ್ರೀ ಗೋವಿಂದ ಎಂ. ಕಾರಜೋಳ : ಹಾಗಾದರೆ ನಾನು ಧರಣಿ ಕುಳಿತುಕೊಳ್ಳ ಬೇಕಾಗುತ್ತದೆ .....

ಉಪಾಧ್ಯಕ್ಷರು : ಈಗಾಗಲೇ ತಮ್ಮ ಅರ್ಜಿಯನ್ನು ರಿಜೆಕ್ಟ್ ಮಾಡಲಾಗಿದೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಧರಣಿ ಕುಳಿತುಕೊಳ್ಳುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಗೋವಿಂದ ಕಾರಜೋಳ ಅವರು ಸಭಾಧ್ಯಕ್ಷರ ಪೀಠದ ಮುಂಭಾಗದಲ್ಲಿ ಧರಣಿ ಕುಳಿತುಕೊಂಡರು)

(ಗೊಂದಲ)

ಉಪಾಧ್ಯಕ್ಷರು : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಈಗಾಗಲೇ ತಮ್ಮ ಅರ್ಜಿಯನ್ನು ರಿಜೆಕ್ಟ್ ಮಾಡಲಾಗಿದೆ. ರೂಲ್ಸ್ ಪ್ರಕಾರ ತಮಗೆ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಆಗುವುದಿಲ್ಲ. ಹೊರಗಿನ ವಿಷಯವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಈಗಾಗಲೇ ಅದನ್ನು ಅವರು ಡಿನೈ ಮಾಡಿಬಿಟ್ಟಿದ್ದಾರೆ. ನಾನು ಮಾತನಾಡಿಲ್ಲ ಎಂದು ಅವರು ಡಿನೈ ಮಾಡಿದಮೇಲೆ ತಾವು ಈ ರೀತಿ ಮಾಡಿದರೆ ಹೇಗೆ? ಈಗ ಮಾನ್ಯ ಸದಸ್ಯರು ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಬೇಕು. ಸದನದ ನಿಯಮಾವಳಿ ಪ್ರಕಾರ ನಾವು ನಡೆದುಕೊಳ್ಳಬೇಕು. ತಾವು ಸದಸ್ಯರಾಗಿ ಈ ರೀತಿ ಮಾಡಬಾರದು. ಈಗಾಗಲೇ ತಮ್ಮ ಅರ್ಜಿಯನ್ನು ರಿಜೆಕ್ಟ್ ಮಾಡಿದ್ದಾರೆ. ತಾವು ಈ ರೀತಿ ಮಾಡಿದರೆ ಹೇಗೆ? ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಅವರು ಕೂಡ ಈಗಾಗಲೇ ಡಿನೈ ಮಾಡಿದ್ದಾರೆ. ಅವರು ಇಲ್ಲಿ ಇಲ್ಲ. ಅವರೂ ಕೂಡ ಡಿನೈ ಮಾಡಿರುವುದರಿಂದ ತಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಅವರು ಇಲ್ಲದೇ ಇದ್ದಾಗ ನೀವು ಪ್ರಸ್ತಾಪ ಮಾಡಿದರೆ ಅದು ಸರಿಯಾಗುವುದಿಲ್ಲ. ತಮ್ಮ ಅರ್ಜಿಯನ್ನು ರಿಜೆಕ್ಟ್ ಮಾಡಿದ್ದೇವೆ. ಅವರು ಡಿನೈ ಮಾಡಿದ್ದಾರೆ. ಮತ್ತೆ ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲವೆಂದು ತಮಗೆ ಹೇಳಿಬಿಟ್ಟಿದ್ದೇನೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ಅವರು ಕೊಟ್ಟಿರತಕ್ಕಂಥ ನೋಟೀಸ್ ಕೂಡ ರಿಜೆಕ್ಟ್ ಆಗಿದೆ. ಸಂಬಂಧಪಟ್ಟ ಮಂತ್ರಿಗಳಾದ ಶ್ರೀ ಎಸ್.ಎಸ್. ಪಾಟೀಲ್ ಅವರು ಇದನ್ನು ಟೋಟಲ್ ಆಗಿ ಡಿನೈ ಮಾಡಿದ್ದಾರೆ, ನಾನು ಆ ತರಹ ಹೇಳಿಲ್ಲ ಎಂದು ಮತ್ತೆ ಪದೇ ಪದೇ ಮಾನ್ಯ ಸದಸ್ಯರಾದ ಕಾರಜೋಳ ಅವರು ಅದನ್ನು ಎತ್ತಿ ಪ್ರಸ್ತಾಪ ಮಾಡತಕ್ಕಂಥಾದ್ದು ಸರಿಯಾದುದ್ದಲ್ಲ. ಒಮ್ಮೆ

ಅದಕ್ಕೆ ಉತ್ತರ ಕೊಟ್ಟಾಗಿಡೆ. ದಯವಿಟ್ಟು ಅವರು ತಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಬೇಕು. ಅದಕ್ಕೆ ಪ್ರತ್ಯೇಕ ನೋಟೀಸ್ ಕೊಡಬೇಕಾಗುತ್ತದೆ. ಶೂನ್ಯವೇಳೆಯಲ್ಲಿ ಇದನ್ನು ಪ್ರಸ್ತಾಪ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ .....

ಉಪಾಧ್ಯಕ್ಷರು : ನೀವು ಅವರ ವಕೀಲರೇನು? ತಾವು ದಯಮಾಡಿ ಇದರೊಳಗೆ ಇಂಟರ್ ಫಿಯರ್ ಮಾಡಬಾರದು. ಅದು ತಮ್ಮ ಕೆಲಸ ಅಲ್ಲ. ತಾವು ದಯಮಾಡಿ ತಮ್ಮ ಸ್ಥಾನಕ್ಕೆ ಹೋಗಿ

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಅಧ್ಯಕ್ಷರೇ, ಒಂದು ನಿಮಿಷ .....

ಉಪಾಧ್ಯಕ್ಷರು : ಈಗಾಗಲೇ ಅವರ ಅರ್ಜಿಯನ್ನು ರಿಜೆಕ್ಟ್ ಮಾಡಲಾಗಿದೆ. ಅವಕಾಶ ಇಲ್ಲವೆಂದಮೇಲೆ ಮತ್ತೆ ಏಕೆ ಒಂದು ನಿಮಿಷ? ಬೇರೆ ವಿಷಯ ಇದ್ದರೆ ಹೇಳಿ.....

ಶ್ರೀ ಟಿ.ಬಿ. ಜಯಚಂದ್ರ : ಸ್ವಲ್ಪ ಕೇಳಿ. ಒಂದು ನಿಮಿಷ .....

ಉಪಾಧ್ಯಕ್ಷರು : ಈ ವಿಷಯಕ್ಕೆ ಅವಕಾಶ ಇಲ್ಲ. ಈಗಾಗಲೇ ಅರ್ಜಿಯನ್ನು ರಿಜೆಕ್ಟ್ ಮಾಡಿದ್ದಾರೆ. ನಾನು ಆ ರೀತಿ ಹೇಳಿಲ್ಲ ಎಂದು ಅವರೂ ಸಹ ಡಿನೈ ಮಾಡಿದ್ದಾರೆ. ಆ ರೀತಿ ಹೇಳಿಲ್ಲ ಎಂಬುದನ್ನು ಅವರು ಹೌಸ್‌ನಲ್ಲಿ ಸ್ಪಷ್ಟಪಡಿಸಿದ್ದಾರೆ. ಮತ್ತೆ ಇದು ಹೊರಗಡೆ ನಡೆದಂಥ ವಿಷಯ. ಇದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ನಾನು ಇದರ ಬಗ್ಗೆ ಅವಕಾಶ ಕೊಡುವುದಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಅಧ್ಯಕ್ಷರೇ, ಸ್ವಲ್ಪ .....

ಉಪಾಧ್ಯಕ್ಷರು : ಈಗ ಸದನವನ್ನು ಅನಿರ್ಧಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 4 ಗಂಟೆ 34 ನಿಮಿಷಕ್ಕೆ ಅನಿರ್ಧಿಷ್ಟಕಾಲದವರೆಗೆ ಮುಂದೂಡಲ್ಪಟ್ಟಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)